ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.**199/2025**

| | | | |
|---|---|---|---|
| ಸಾಕ್ಷಿಯ ಹೆಸರುಃ | ಕುಮಾರಿ ಸುಪ್ರೀತ | ಚಾಸಾ ಃ | 3 |
| ತಂದೆಯ ಹೆಸರುಃ | ಸುರೇಶ ಬಿ ಎನ್ | ಪ್ರಾಸಾಃ | 2 |
| ವಯಸ್ಸುಃ | 16 ವರ್ಷ | | |
| ಉದ್ಯೋಗಃ | ಪ್ರಥಮ ಪಿಯುಸಿ ವಿದ್ಯಾರ್ಥಿನಿ | | |
| ವಾಸಃ | ಬಪ್ಪುಂಜಿ, ಹೆದ್ಸೆ ಗ್ರಾಮ, ಕೊಪ್ಪ ತಾಲೂಕು | | |

ದಿನಾಂಕಃ27/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 1 ನನ್ನ ತಂದೆ , ಚಾಸಾ 2 ನನ್ನ ತಾಯಿ, ಚಾಸಾ 4 ಹಾಗೂ 5 ನನ್ನ ಊರು ಮನೆಯವರು, ಚಾಸಾ 6 ನನ್ನ ಅತ್ತೆಯಾಗಬೇಕು. ಚಾಸಾ 7 ನನ್ನ ಅಜ್ಜಿಯಾಗಬೇಕು.

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು.

ಜನವರಿ, 2025 ರಲ್ಲಿ ಚಾಸಾ 1 ಹಾಗೂ 1 ನೇ ಆರೋಪಿತರಿಗೂ ಕೋಳಿ ವಿಚಾರದಲ್ಲಿ ಜಗಳ ನಡೆದಿದ್ದು ದಿನಾಂಕಃ18/01/2025 ರಂದು 3-30 ಗಂಟೆಗೆ ನಾನು , ನನ್ನ ತಾಯಿ ಮತ್ತು ನನ್ನ ತಂದೆ ಮನೆಯಲ್ಲಿರುವಾಗ 1 ನೆ ಆರೋಪಿ ಹಾಗೂ ಅವರ ಸಂಬಂಧಿಕರು ಬಂದು ನನ್ನ ತಂದೆ ಮಲಗಿರುವಾಗ ಕೋಲಿಂದ ಅವರ ಮೈ, ಕೈಗೆ ಹೊಡೆದು, ಅವಾಚ್ಯವಾಗಿ ಬೈದಿರುತ್ತಾರೆ. ನಂತರ ನಮ್ಮ ತಂದೆ ದಿನಾಂಕಃ19/01/2025 ರಂದು ಎನ್. ಆರ್. ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ನಂತರ ದಿಃ03/03/2025 ರಂದು ತೀರ್ಥಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದು, ನಂತರ ಅಲ್ಲಿಂದ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

ನಂತರ ಪೋಲಿಸರು ದಿಃ06/03/2025 ರಂದು ನಮ್ಮ ಮನೆಗೆ ಬಂದು ಮಹಜರ್ ಕ್ರಮ ಜರುಗಿಸಿದ್ದು, ಕೃತ್ಯ ನಡೆದಿದೆ ಎನ್ನಲಾದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ 4 ಮತ್ತು 5 ರವರು ಹಾಜರಿದ್ದರು. ಸದರಿ ಮಹಜರನ್ನು 12-30 ರಿಂದ 1-00 ಗಂಟೆಯವರೆಗೂ ಜರುಗಿಸಿದ್ದು ಆ ಸಮಯದಲ್ಲಿ ಆರೋಪಿತರು ಕೃತ್ಯಕ್ಕೆ ಬಳಸಿದ್ದ

ದೊಣ್ಣೆಯನ್ನು ವಶಕ್ಕೆ ಪಡೆದಿರುತ್ತಾರೆ. ಹಾಗೂ ಫೋಟೋ ತೆಗೆದಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಈ ಸಂಬಂಧ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಸ್ಥಳ ಮತ್ತು ಅಮಾನತು ಮಹಜರಾಗಿದ್ದು ಅದನ್ನು ನಿಪಿ.1 ಎಂದೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದೂ ಗುರುತಿಸಲಾಯಿತು. 2 ಪೋಟೋಗಳನ್ನು ನಿಪಿ.2 ಹಾಗೂ 3 ಎಂದೂ, ಒಂದು ಸಿಡಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

<u>ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಆರೋಪಿತರು ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯೊಂದಿಗೆ ಬಂದರು ಎನ್ನಲಾದ ಅವರ ಸಂಬಂಧಿಕರು 2 ಹಾಗೂ 3ನೇ ಆರೋಪಿತರಾಗಿರುತ್ತಾರೆ ಎಂದರೆ ಸರಿ. ಅದೇ ದಿನ ಜಯಪುರ ಪೋಲಿಸರು ನಮ್ಮ ಮನೆಗೆ ಬಂದು ಸದರಿ ಗಲಾಟೆ ಸಂಬಂಧ ಚಾಸಾ 1 ರವರಿಗೆ ದೂರು ಕೊಡಲು ಹೇಳಿದಾಗ ಚಾಸಾ 1 ರವರು ಯೋಚನೆ ಮಾಡಿ ಆಮೇಲೆ ದೂರು ನೀಡುವುದಾಗಿ ಹೇಳಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರ ಃ ಶ್ರೀ ಬಿವಿಜಿ ವಕೀಲರಿಂದಃ</u>

ಆರೋಪಿತರು ಚಾಸಾ 1 , ನನ್ನ ತಂದೆ ವಿರುದ್ಧ ಹಲ್ಲೆ ವಿಚಾರವಾಗಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ. ಆ ಸಂಬಂಧ ನನ್ನ ತಂದೆ 7 ದಿನಗಳ ಕಾಲ ನ್ಯಾಯಾಂಗ

ಬಂಧನದಲ್ಲಿದ್ದರು ಎಂದರೆ ಸರಿ. ಕೃತ್ಯ ನಡೆದಿದೆ ಎನ್ನಲಾದ ದಿನದಂದೆ ದೂರು ದಾಖಲಿಸಿರುವುದಿಲ್ಲ ಎಂದರೆ ಅದೇ ದಿನ ದೂರು ನೀಡಿದ್ದೆವು ಎನ್ನುತ್ತಾರೆ. ಆ ರೀತಿ ಯಾವುದೇ ದೂರು ನ್ಯಾಯಾಲಯದ ಮುಂದಿರುವುದಿಲ್ಲ, ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಗಲಾಟೆಯ ವಿಚಾರವಾಗಿ ಪೋಲಿಸರು ಚಾಸಾ 1 ರವರಿಗೆ ಎಚ್ಚರಿಕೆ ನಿಡೀದ್ದರು ಎಂದರೆ ಸರಿ, ಅದಾದ ನಂತರ ಯಾವುದೆ ಗಲಾಟೆ ನಡೇದಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಜೈಲಿಂದ ಬಿಡುಗಡೆಯಾದ ನಂತರ ಆರೋಪಿತರಿಗೆ ಬುದ್ದಿ ಕಲಿಸಲು ಸುಳ್ಳು ದೂರು ದಾಖಲು ಮಾಡಿದ್ದರು ಎಂದರೆ ಸರಿ. ಒಂದು ವೇಳೆ ಕೃತ್ಯ ನಡೆದದ್ದೆ ಆದರೆ ಅದೆ ದಿನ ದೂರು ದಾಖಲು ಮಾಡುತ್ತಿದ್ದರು, ದೂರು ನೀಡಲು 2 ತಿಂಗಳು ತಡವಾಗಿರುತ್ತದೆ ಎಂದರೆ ಸರಿ.

ಜನವರಿ ತಿಂಗಳಲ್ಲಿ ಘಟನೆಗೆ ಸಂಬಂಧಿಸಿ ಯಾವುದೆ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ.1 ರ ದಾಖಲೆಗೆ ಠಾಣೆಯಲ್ಲಿ ನನ್ನ ಹಾಗೂ ಇತರರ ಸಹಿ ಪಡೆದುಕೊಳ್ಳಲಾಯಿತು ಎಂದರೆ ಸರಿ. ಮುದ್ದೆ ಮಾಲು 1 ರ ದೊಣ್ಣೆಯನ್ನು ಪೋಲಿಸರ ಮುಂದೆ ನಾನೇ ಹಾಜರ ಪಡಿಸಿರುತ್ತೇನೆ. ಮುದ್ದೆ ಮಾಲು 1 ಅನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ. ನಿಫಿ.2 ಮತ್ತು 3 ಅನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಗಿರುತ್ತದೆ ಎಂದು ಹೇಳಲು ಸಾಧ್ಯ ಇಲ್ಲ ಎಂದರೆ ಸರಿ.

ನಿಪಿ.1 ರ ಮಹಜರಿನಲ್ಲಿರುವ ಚೆಕ್ಕುಬಂಧಿಯ ಬಗ್ಗ ನನಗೆ ಸ್ಪಷ್ಟವಾಗಿ ಗೊತ್ತಿರುವುದಿಲ್ಲ. ನಿಪಿ1 ರ ದಾಖಲೆಗೆ ನಾನು 3-4 ಸಹಿ ಮಾಡಿರುತ್ತೇನೆ. ಸದರಿ ನಿಪಿ.1 ದಾಖಲೆಗೆ ನಾನು ಸಹಿ ಮಾಡುವ ಕಾಲಕ್ಕೆ ಖಾಲಿ ಹಾಳೆಗೆ ಸಹಿ ಮಾಡಿರುತ್ತೇನೆ.

ಯಾವುದೆ ಗಲಾಟೆ ನಡೆಯದೆ ಇದ್ದರೂ ಸಹಾ ಆರೋಪಿತರ ಮೇಲಿನ ದ್ವೇಷದಿಂದ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮುದ್ದೆಮಾಲಿಗೂ ಪ್ರಕರಣಕ್ಕೂ, ಆರೋಪಿತರಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ